## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 432 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಎ ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 10.07.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಮಂಜೂರಾಗಿರುವ ಆಶಾ ಕಾರ್ಯಕರ್ತೆಯರ ಹುದ್ದೆಗಳು ಎಷ್ಟು; ಮತ್ತು ಈ ರೀತಿ ಮಂಜೂರಾದ ಎಷ್ಟು ಹುದ್ದೆಗಳಲ್ಲಿ ಆಶಾ ಕಾರ್ಯಕರ್ತೆಯರು ಕೆಲಸ ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ನಮ್ಮ ರಾಜ್ಯಕ್ಕೆ 42,524 ಆಶಾ ಕಾರ್ಯಕರ್ತೆಯರ ಹುದ್ದೆಗಳು ಮಂಜೂರಾಗಿದ್ದು, 41,119 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯ ಸರ್ಕಾರ ಈ ಅಭಿಯಾನದ ಅಡಿಯಲ್ಲಿ ಮಹಾಂತ್ವಕಾಂಕ್ಷೆ ಜಿಲ್ಲೆಗಳು ಒಳಗೊಂಡಂತೆ ಎಲ್ಲಾ ಜಿಲ್ಲೆಗಳಲ್ಲಿ ಖಾಲಿಯಿರುವ ಆಶಾ ಕಾರ್ಯಕರ್ತೆಯರ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು) | ಆಶಾ ಕಾರ್ಯಕರ್ತೆಯರ ಆಯ್ಕೆಯನ್ನು ಜಿಲ್ಲಾ ಪಂಚಾಯಿತಿ ವತಿಯಿಂದ ಕೈಗೊಳ್ಳಲಾಗುವುದು. ಆಶಾ ಕಾರ್ಯಕರ್ತೆಯ ಆಯ್ಕೆ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>1. ಪ್ರತಿ ತಿಂಗಳು ನಡೆಯುವ ಜಿಲ್ಲಾ ಮಟ್ಟದ ಅಧಿಕಾರಿಗಳ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಆಶಾ ಆಯ್ಕೆ ಪ್ರಕ್ರಿಯೆಯನ್ನು ನಿರ್ವಹಿಸಲು ಅಗತ್ಯ ಸೂಚನೆಗಳನ್ನು ನೀಡಲಾಗಿದೆ.<br><br>2. ಗ್ರಾಮ ಸಭೆ, ಮಹಿಳಾ ಆರೋಗ್ಯ ಸಮಿತಿ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ, ಪೌಷ್ಟಿಕ ಸಮಿತಿ ಸಭೆ ಹಾಗೂ ಗ್ರಾಮ/ನಗರ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಚಾರ ಮಾಡಲಾಗಿದೆ.<br><br>3. ವೈದ್ಯಾಧಿಕಾರಿಗಳು ಮತ್ತು ತಾಲ್ಲೂಕು ಆರೋಗ್ಯ ಅಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ವಹಿಸಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಗಿದೆ. |

| | | |
|---|---|---|
| ಇ) | ರಾಜ್ಯದಲ್ಲಿನ ಆಶಾ ಕಾರ್ಯಕರ್ತೆಯರಿಗೆ ನೀಡುವ ವೇತನ/ಗೌರವ ಧನ ಎಷ್ಟು ಮತ್ತು ಈ ವೇತನ/ಗೌರವ ಧನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಅನುಪಾತದಲ್ಲಿ ಭರಿಸುತ್ತಿವೆ; (ಪೂರ್ಣ ಮಾಹಿತಿ ನೀಡುವುದು) | ಆಶಾ ಕಾರ್ಯಕರ್ತೆಯು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೂರ್ಣಾವಧಿ/ಅರೆಕಾಲಿಕ ನೌಕರರಲ್ಲ.<br><br>ಆಶಾ ಕಾರ್ಯಕರ್ತೆಯರಿಗೆ ಕಾರ್ಯನಿರ್ವಹಣೆಯ ಆಧಾರದ ಮೇಲೆ ಗೌರವಧನ ಮತ್ತು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br><br>ರಾಜ್ಯ ಸರ್ಕಾರದಿಂದ ಮಾಸಿಕ ನಿಶ್ಚಿತ ಗೌರವಧನ ರೂ.5000/- ಗಳನ್ನು ನೀಡಲಾಗುತ್ತಿದೆ. ಈ ವೆಚ್ಚವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 40 ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ವಿವರಗಳನ್ನು **ಅನುಬಂಧ**-2ರಲ್ಲಿ ನೀಡಲಾಗಿದೆ.<br><br>ಈ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಶೇ.60 ಮತ್ತು ರಾಜ್ಯ ಸರ್ಕಾರದಿಂದ ಶೇ.40ರ ಅನುಪಾತದಲ್ಲಿ ಭರಿಸಲಾಗುತ್ತದೆ. |
| ಈ) | ರಾಜ್ಯದಲ್ಲಿನ ಆಶಾ ಕಾರ್ಯಕರ್ತೆಯರಿಗೆ ಕಳೆದ 3 ತಿಂಗಳಿಂದ ವೇತನ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬಾಕಿ ವೇತನ ಪಾವತಿಸಲು ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಆಶಾ ಕಾರ್ಯಕರ್ತೆಯರಿಗೆ ಜುಲೈ-2023ರ ಮಾಹೆಯವರೆಗೆ ವೇತನ/ಗೌರವಧನ ಪಾವತಿಗಾಗಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. |

**ಸಂಖ್ಯೆ: ಆಕುಕ 46 ಎಸ್.ಟಿ.ಕ್ಯೂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

| ಅನುಬಂಧ-1 | | | | |
|---|---|---|---|---|
| ಆಶಾ ಕಾರ್ಯಕರ್ತೆಯರ ಮಂಜೂರಾತಿ ಮತ್ತು ಕಾರ್ಯನಿರ್ವಹಣಾ ಸ್ಥಿತಿ | | | | |
| ಕ್ರ.ಸಂ | ಜಿಲ್ಲೆಯ ಹೆಸರು | ಮಂಜೂರಾತಿ | ಕಾರ್ಯನಿರತ | ಖಾಲಿ |
| 1 | ಬಾಗಲಕೋಟೆ | 1447 | 1437 | 10 |
| 2 | ಬೆಂಗಳೂರು ಗ್ರಾಮಾಂತರ | 834 | 793 | 41 |
| 3 | ಬೆಂಗಳೂರು ನಗರ (ಬಿ.ಬಿ.ಎಂ.ಪಿ ಸೇರಿದಂತೆ) | 2102 | 1890 | 212 |
| 4 | ಬೆಳಗಾವಿ | 3862 | 3805 | 57 |
| 5 | ಬಳ್ಳಾರಿ | 1041 | 991 | 50 |
| 6 | ಬೀದರ್ | 1362 | 1333 | 29 |
| 7 | ಚಾಮರಾಜನಗರ | 800 | 779 | 21 |
| 8 | ಚಿಕ್ಕಬಳ್ಳಾಪುರ | 1064 | 1021 | 43 |
| 9 | ಚಿಕ್ಕಮಗಳೂರು | 959 | 928 | 31 |
| 10 | ಚಿತ್ರದುರ್ಗ | 1481 | 1446 | 35 |
| 11 | ದಕ್ಷಿಣ ಕನ್ನಡ | 1381 | 1372 | 9 |
| 12 | ಧಾರವಾಡ | 1033 | 999 | 34 |
| 13 | ದಾವಣಗೆರೆ | 1228 | 1185 | 43 |
| 14 | ಗದಗ | 767 | 734 | 33 |
| 15 | ಕಲ್ಬುರ್ಗಿ | 1899 | 1832 | 67 |
| 16 | ಹಾಸನ | 1498 | 1472 | 26 |
| 17 | ಹಾವೇರಿ | 1501 | 1448 | 53 |
| 18 | ಕೊಡಗು | 502 | 489 | 13 |
| 19 | ಕೋಲಾರ | 974 | 914 | 60 |
| 20 | ಕೊಪ್ಪಳ | 1343 | 1271 | 72 |
| 21 | ಮಂಡ್ಯ | 1397 | 1364 | 33 |
| 22 | ಮೈಸೂರು | 1839 | 1771 | 68 |
| 23 | ರಾಯಚೂರು | 1508 | 1452 | 56 |
| 24 | ರಾಮನಗರ | 879 | 804 | 75 |
| 25 | ಶಿವಮೊಗ್ಗ | 1362 | 1330 | 32 |

| | | | | |
|---|---|---|---|---|
| 26 | ತುಮಕೂರು | 2154 | 2085 | 69 |
| 27 | ಉಡುಪಿ | 1028 | 999 | 29 |
| 28 | ಉತ್ತರ ಕನ್ನಡ | 1400 | 1378 | 22 |
| 29 | ವಿಜಯನಗರ | 1047 | 1024 | 23 |
| 30 | ವಿಜಯಪುರ | 1808 | 1765 | 43 |
| 31 | ಯಾದಗಿರಿ | 1024 | 1008 | 16 |
| - | ಒಟ್ಟು | **42524** | **41119** | **1405** |

6.7.23

ಆಯುಕ್ತರು,
ಆರೋಗ್ಯ ಮತ್ತು ಕು.ಕ.ಸೇವೆಗಳು,

ಅನುಬಂಧ-2

ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಗೆ ಅನುಸಾರವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರೋತ್ಸಾಹಧನವನ್ನು 40 ಆರೋಗ್ಯ ಸಂಬಂಧಿ ಚಟುವಟಿಕೆಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

## ಎ. ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ಆಹಾರ ದಿನಾಚರಣೆಯಲ್ಲಿ ಭಾಗಿಯಾದರೆ | 200 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಹಾಜರಾದರೆ | 150 |
| 3 | ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಪೌಷ್ಠಿಕಾಂಶ ಸಮಿತಿ ಸಭೆಯನ್ನು ನಡೆಸಿದರೆ | 150 |
| 4 | ಗರ್ಭಿಣಿಯರ ಪಟ್ಟಿಯ ನಿರ್ವಹಣೆ | 300 |
| 5 | ಅರ್ಹದಂಪತಿಗಳ ಪಟ್ಟಿಯನ್ನು ತಯಾರಿಸುವುದು | 300 |
| 6 | ಮನೆ ಮನೆ ಸಮೀಕ್ಷೆ | 300 |
| 7 | ಗ್ರಾಮ ಆರೋಗ್ಯ ಪುಸ್ತಕದ ನಿರ್ವಹಣೆಗೆ | 300 |
| 8 | ಚುಚ್ಚುಮದ್ದು ಸೇವೆಗಳಿಗೆ ಅರ್ಹ ಮಕ್ಕಳ ಪಟ್ಟಿಯನ್ನು ತಯಾರಿಸಿದರೆ | 300 |

## ಬಿ. ಕಾರ್ಯನಿರ್ವಹಣಾ ಪ್ರೋತ್ಸಾಹಧನಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1. | ಗರ್ಭಿಣಿ ಆರೈಕೆಗೆ | 300/200 |
| 2. | ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಿ ಗರ್ಭಿಣಿಯನ್ನು ಆರೋಗ್ಯ ಸಂಸ್ಥೆಗೆ ಕರೆದೊಯ್ಯುದರೆ | 300/200 |
| 3. | ತಾಯಿ ಮರಣದ ವರದಿ | 200 |
| 4. | ಗೃಹದಾರಿತ ನವಜಾತ ಶಿಶು ಆರೈಕೆ | 250 |

| | | |
|---|---|---|
| 5. | ಕಡಿಮೆ ಹುಟ್ಟು ತೂಕದ ಮಕ್ಕಳ ಅನುಸರಣೆ | 50 |
| 6. | ಎಸ್.ಎನ್.ಸಿ.ಯುವಿನಿಂದ ಬಿಡುಗಡೆಯಾದ ಮಕ್ಕಳ ಅನುಸರಣೆ | 50 |
| 7. | ಮಾ ಕಾರ್ಯಕ್ರಮದಡಿ ಬೆಂಬಲ ಗುಂಪುಗಳ ಸಭೆಯನ್ನು ನಡೆಸಲು | 100 |
| 8. | ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸುವುದು ಮತ್ತು ಆರೋಗ್ಯ ಸಂಸ್ಥೆಗಳಿಗೆ ಶಿಫಾರಸು ಮಾಡುವುದು. | 150 |
| 9. | ಚುಚ್ಚುಮದ್ದು ಸೇವೆಗಳಿಗೆ ಫಲಾನುಭವಿಗಳನ್ನು ಸಂಟಿಸುವುದು. | 150 |
| 10. | ಮೊದಲ ವರ್ಷದ ಚುಚ್ಚುಮದ್ದು ಸೇವೆಗಳಿಗೆ | 100 |
| 11. | ಎರಡನೇ ವರ್ಷದ ಚುಚ್ಚುಮದ್ದು ಸೇವೆಗಳು | 75 |
| 12. | 5–6 ವರ್ಷದ ಮಕ್ಕಳಿಗೆ ಡಿ.ಪಿ.ಟಿ ಬೂಸ್ಟರ್ ಲಸಿಕೆಯನ್ನು ಕೊಡಿಸಿದರೆ | 50 |
| 13. | ಪಿ.ಪಿ.ಐ.ಯು.ಸಿ.ಡಿ ಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಿದರೆ | 150 |
| 14. | ಪುರುಷರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 200 |
| 15. | ಸ್ತ್ರೀಯರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 150 |
| 16. | ಅನಪೇಕ್ಷಿತ ಗರ್ಭಧಾರಣೆಗಳಿಗೆ ವೈದ್ಯಕೀಯ ಗರ್ಭಪಾತಕ್ಕೆ ಉತ್ತೇಜಿಸಿದರೆ | 100 |
| 17. | ಎರಡು ಜನನದ ನಡುವೆ ಅಂತರವನ್ನು ಖಾತ್ರಿಪಡಿಸಿದರೆ | 500 |
| 18. | ಪಿ.ಎ.ಐ.ಯು.ಸಿ.ಡಿ ಅಳವಡಿಕೆಗೆ ಪ್ರೋತ್ಸಾಹಿಸುವುದು | 150 |
| 19. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಬಹುವಿಧ ಔಷಧಿ ಕ್ಷಯ ರೋಗ ಚಿಕಿತ್ಸೆ ನೀಡಿದರೆ | 5000 |
| 20. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೊಸ ಮತ್ತು ಹಿಂದಿನ ಆರೈಕೆ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 21. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೆಚ್–ಮಾನೋಪಲಿ ರೆಜಿಮನ್ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 22. | ಕುಷ್ಠರೋಗಿಗಳಿಗೆ (ಎಂ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 600 |
| 23. | ಕುಷ್ಠರೋಗಿಗಳಿಗೆ (ಪಿ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 400 |
| 24. | ಕುಷ್ಠ ರೋಗಿಗಳನ್ನು ಗುರುತಿಸುವಿಕೆ | 250 |

| | | |
|---|---|---|
| 25. | ಮಲೇರಿಯಾ ರೋಗಕ್ಕೆ ಚಿಕಿತ್ಸೆ | 200 |
| 26. | ಸಂಶಯಾಸ್ಪದ ಮಲೇರಿಯಾ ಪ್ರಕರಣಗಳ ಸ್ಲೈಡ್ ತಯಾರಿಸುವುದು | 150 |
| 27. | ಉಪ್ಪಿನ ಪರೀಕ್ಷೆ | 25 |
| 28. | ಹೆಚ್‌ಬಿವೈಸಿ | 250 |
| 29. | ಎನ್‌ಸಿಡಿ ಚಟುವಟಿಕೆಗಳು | 110 |
| 30. | ಅಂತರ ಚುಚ್ಚುಮದ್ದು ಪಡೆಯಲು ಅರ್ಹ ಫಲಾನುಭವಿಗಳನ್ನು ಪ್ರೇರೆಪಿಸಿದರೆ | 100 |
| 31. | ePMSMA ಗೆ ಗಂಡಾಂತರ ಗರ್ಭಿಣಿಯರನ್ನು ಕರೆದೊಯ್ಯುವರೆ (ಗರಿಷ್ಠ 3 ಭೇಟಿಗಳು) | 100 (ಪ್ರತಿ ಭೇಟಿಗೆ) |
| 32. | ಗಂಡಾಂತರ ಬಾಣಂತಿಯರ ಅನುಸರಣಾ ಮನೆ ಭೇಟಿಗಳಿಗೆ | 250 |

6.7.23

ಆಯುಕ್ತರು,
ಆರೋಗ್ಯ ಮತ್ತು ಕು.ಕ.ಸೇವೆಗಳು,